ಸಿ ಸಿ ಸಂಖ್ಯೆ 1738/2021

ಪಿ ಡಬ್ಲ್ಯೂ: 1

**ದಿನಾಂಕ :** 04.06.2026**ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ – ಆರೋಪಿ ಪರವಾಗಿ ಶ್ರೀ ಎಂ ಎನ್ ವಕೀಲರಿಂದಃ**

ತಿರುಪೂರಲ್ಲಿ ಆರೋಪಿಗೆ ಸಂಬಂಧಿಸಿದ ಟ್ರಾನ್ಸ್‌ಪೋರ್ಟ್ ಕಂಪನಿ ಇತ್ತು ಎಂಬ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ನಾನು ತೆರಿಗೆ ಪಾವತಿದಾರನಾಗಿರುತ್ತೇನೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ನಾನು ಸಾಲ ಕೊಟ್ಟಿರುವುದಿಲ್ಲ. ಅಷ್ಟು ದೊಡ್ಡ ಮೊತ್ತ ಆ ದಿನ ನನ್ನ ಬಳಿ ಇತ್ತು ಎಂಬ ಬಗ್ಗೆ ದಾಖಲಾತಿಯನ್ನು ಕೇಳಿರುವುದಿಲ್ಲ ಹಾಗಾಗಿ ನಾನು ಕೊಟ್ಟಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರ ನಡೆಯುವ ಸಮಯದಲ್ಲಿ ನನ್ನನ್ನು ಮತ್ತು ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ಸಾಕ್ಷಿಯು ಮುಂದುವರೆದು, ಆರೋಪಿಯು ಹಣ ಕೇಳಿದ್ದು ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಹಣ ಕೊಟ್ಟಿದ್ದೆ. ಆ ದಿನ ನನ್ನ ಪತ್ನಿ ಮನೆಯಲ್ಲಿ ಇದ್ದರು ಅವರಿಗೆ ನಮ್ಮ ನಡುವಿನ ಹಣದ ವ್ಯವಹಾರ ಗೊತ್ತು.

ಆರೋಪಿಯ ತಂದೆ, ತಾಯಿ ಹಾಗೂ ವಾಸ ಸ್ಥಳದ ಬಗ್ಗೆ ನನಗೆ ಮಾಹಿತಿ ಇಲ್ಲ. ತುಂಬಾ ಆಪ್ತರು ಹಣ ಕೇಳಿದಾಗ ಸಾಲ ಕೊಡುತ್ತೇನೆ. ನನ್ನ ಮಾಸಿಕ ಆದಾಯದ ಬಗ್ಗೆ ನ್ಯಾಯಾಲಯ ಕೇಳದೇ ಇರುವ ಕಾರಣ ನಾನು ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ನಾನು ವ್ಯಾಪಾರ ಮಾಡುತ್ತಿದ್ದು ಆ ಮೂಲಕ ಆರೋಪಿ ಪರಿಚಯಸ್ಥರಾಗಿರುತ್ತಾರೆ. ನಾನು ಅಕ್ಕಿ ವ್ಯಾಪಾರ ಮಾಡುತ್ತಿದ್ದೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ